ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **14-03-2025**

ಪಾಟಿ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ

ವಾದಿ ನನಗೆ ತಾಯಿಯಾಗಬೇಕು. ಅವರು ಕೂಲಿ ಕೆಲಸ ಮಾಡುತ್ತಾರೆ. ಈ ದಿನ ಸಹ ಅವರು ಕೂಲಿ ಕೆಲಸಕ್ಕೆ ಹೋಗಿರುತ್ತಾರೆ. ನಾನು ಈ ದಾವೆಯ ಪಕ್ಷಗಾರನಲ್ಲ. ಅಧಿಕಾರ ಪತ್ರದ ಪಡೆದು ಸಾಕ್ಷಿ ಹೇಳುತ್ತಿದ್ದೇನೆ. ನನ್ನ ತಾಯಿ ಬಂದು ಸಾಕ್ಷಿ ಹೇಳಲು ತೊಂದರೆ ಇರುತ್ತದೆ. ಅವರು ಅವಿದ್ಯಾವಂತರಾಗಿದ್ದು ಸರಿಯಾಗಿ ಸಾಕ್ಷಿ ಕೊಡಲು ಬಾರದ ಕಾರಣ ನಾನು ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಅವರು ಮಾತನಾಡುತ್ತಾರೆ. ನನಗೆ ಪ್ರತಿವಾದಿಗಳು ಮೊದಲಿನಿಂದಲೂ ಪರಿಚಯ ಇರುತ್ತಾರೆ. ಹೊಸಳ್ಳಿಯಲ್ಲಿ ಗದ್ದೆ ಇರುತ್ತದೆ. ಅದರಲ್ಲಿ ಭತ್ತ, ಜೋಳ ಬೆಳೆಯುತ್ತೇನೆ. ಅದರ ಸರ್ವೆ ನಂ.**51/1** ಇರುತ್ತದೆ. ಅಲ್ಲಿ **1.60** ಎಕರೆ ಜಮೀನು ಇರುತ್ತದೆ. ನನ್ನ ಜಮೀನಿನ ಸುತ್ತ ಬೇಲಿ ಹಾಕಿರುವುದಿಲ್ಲ. ನನ್ನ ಜಾಗದ ಪೂರ್ವಕ್ಕೆ ಅಪ್ಪಾಜಿ ರವರ ತೋಟ, ಪಶ್ಚಿಮಕ್ಕೆ ರಂಗಸ್ವಾಮಿ ರವರ ಗದ್ದೆ, ಉತ್ತರಕ್ಕೆ ರಂಗಸ್ವಾಮಿ ರವರ ಗದ್ದೆ, ದಕ್ಷಿಣಕ್ಕೆ ದಯಾನಂದ ರವರ ಜಮೀನು ಇರುತ್ತದೆ.

ನನ್ನ ಜಮೀನನ್ನು ನಾನೇ ವ್ಯವಸಾಯ ಮಾಡುತ್ತೇನೆ. ನನ್ನ ಜಮೀನನ್ನು ಪಾಳು ಬಿಟ್ಟಿಲ್ಲ. ಬೇರೆಯವರ ಜಮೀನಿನ ಮೇಲೆ ಹೋಗಿ ವ್ಯವಸಾಯ ಮಾಡಿರುತ್ತೇನೆ. ಅವರು ಬೇಸಾಯ ಮಾಡಿದಾಗ ನಮ್ಮನ್ನು ಬಿಡುವುದಿಲ್ಲ. ರಂಗಸ್ವಾಮಿ ರವರ ಜಾಗದಲ್ಲಿ ಕೇಳಿಕೊಂಡು ಹೋಗುತ್ತಿದ್ದೇವು. ನನ್ನ ಮನೆ ದಾವಾ ಆಸ್ತಿಯಿಂದ ಅರ್ಧ ಕಿಲೋ ಮೀಟರ್ ದೂರ ಇರುತ್ತದೆ. ಅಲ್ಲಿ ಎಲ್ಲಾ ಜನರಿಗೆ ಸೇರಿ ಒಟ್ಟು **60-70** ಎಕರೆ ಜಮೀನು ಇರಬಹುದು. ಅಲ್ಲಿ ಯಾರ ಗದ್ದೆಗೂ ಸಹ ಬೇಲಿ ಹಾಕಿಲ್ಲ, **1**ನೇ ಪ್ರತಿವಾದಿ ಮಾತ್ರ ಬೇಲಿ ಹಾಕಿ ರಸ್ತೆಯಲ್ಲಿ ಗಿಡ ನೆಟ್ಟಿರುತ್ತಾರೆ. **70** ಎಕರೆ ಜಾಗ **7-8** ಜನರಿಗೆ ಸೇರಿರಬಹುದು. ರಂಗಸ್ವಾಮಿ ರವರ ಜಾಗಕ್ಕೆ ಮುಟ್ಟಿಕೊಂಡಂತೆ ಜಯಣ್ಣ ರವರ ತೆಂಗಿನ ತೋಟ ಇರುತ್ತದೆ

ಅಲ್ಲಿ ಜೋಳ ಬೆಳೆದಿರುತ್ತಾರೆ. ರಂಗಸ್ವಾಮಿ ರವರ ಜಮೀನು ಸಾರ್ವಜನಿಕ ರಸ್ತೆಗೆ ಮುಟ್ಟಿಕೊಂಡಂತೆ ಇರುತ್ತದೆ. ಸದರಿ ರಸ್ತೆ ಆಲೂರಿನಿಂದ ಅವರವರ ಜಾಗಗಳಿಗೆ ನೇರವಾಗಿ ಹೋಗುತ್ತದೆ. ರಂಗಸ್ವಾಮಿ ರವರ ಜಮೀನಿನಲ್ಲಿ ಬೆಳೆ ಬೆಳೆಯುವ ಕಾರಣದಿಂದ ಅಲ್ಲಿಂದ ನಮ್ಮ ಜಮೀನಿಗೆ ಹೋಗಲು ಆಗುವುದಿಲ್ಲ. ನಮ್ಮನ್ನು ರಂಗಸ್ವಾಮಿ ರವರ ತೊಂದರೆ ಮಾಡುತ್ತಿದ್ದಾರೆ ಎಂದು ದಾಖಲೆ ಕೊಟ್ಟಿಲ್ಲ.

**2** ನೇ ಪ್ರತಿವಾದಿಯ ಜಾಗ ನಮ್ಮ ಜಮೀನಿಗೆ ಮುಟ್ಟಿಕೊಂಡಂತೆ ಇರುವುದಿಲ್ಲ, ಅವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. **1** ನೇ ಪ್ರತಿವಾದಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅಪ್ಪಾಜಿಗೆ ಸರ್ವೆ ನಂ.**55/23, 55/24** ಇದೆ ಎಂದರೆ ಸರಿ. ಅದರಲ್ಲಿ ಅವರು ಅಡಿಕೆ ಮತ್ತು ತೆಂಗು ಬೆಳೆಯುತ್ತಿದ್ದಾರೆ ಎಂದರೆ ಸರಿ. ಅಡಿಕೆ ಗಿಡದ ರಕ್ಷಣೆಗಾಗಿ ಬೇಲಿ ಹಾಕಿರುತ್ತಾರೆ ಎಂದರೆ ಸರಿ. ಕೆರೆ ಏರಿಗೂ ಸಹ ಬೇಲಿ ಹಾಕಿರುತ್ತಾರೆ. **2** ನೇ ಪ್ರತಿವಾದಿಯ ಜಮೀನು ಅಪ್ಪಾಜಿ ರವರ ಜಮೀನಿಗೆ ಮುಟ್ಟಿಕೊಂಡಂತೆ ಇರುತ್ತದೆ. ಸರ್ವೆ ನಂ.**55/1** ರ ಪೈಕಿ ಶೀಲಾ, ತಿಪ್ಪಯ್ಯ, ನಾಗಮ್ಮ ರವರಿಗೆ ಜಾಗ ಮಂಜೂರಾಗಿದೆ ಎಂದರೆ ಸರಿ. ಅವರುಗಳು ನನಗೆ ಗೊತ್ತಿರುತ್ತಾರೆ. ಅವರ ಜಮೀನು ಕೆರೆಗೆ ಮುಟ್ಟಿಕೊಂಡಂತೆ ಇರುತ್ತದೆ. ನಿಪಿ **6** ನ್ನು ನಾನೇ ಕೊಟ್ಟಿರುತ್ತೇನೆ. ಅದರಲ್ಲಿ ಸರ್ವೆ ನಂ.**70** ರಲ್ಲಿ ಕೆರೆ ಇರುತ್ತದೆ. ಸರ್ವೆ ನಂ.**69** ನಮ್ಮದೇ ಜಾಗ. ಸರ್ವೆ ನಂ.**55/23, 55/24 1** ನೇ ಪ್ರತಿವಾದಿಗೆ ಸೇರಿರುತ್ತದೆ. ಸರ್ವೆ ನಂ.**55/1** ಪೈಸಾರಿ ಆಸ್ತಿಯಾಗಿರುತ್ತದೆ. ಅದು ಕೆರೆಗೆ ಮುಟ್ಟಿಕೊಂಡಿಲ್ಲ ಅದರ ಬದಲಾಗಿ ಸರ್ವೆ ನಂ.**55/1** ಮತ್ತು ಕೆರೆ ಮದ್ಯೆ ಸರ್ವೆ ನಂ.**55/24, 58/23** ಒಂದಕೊಂದು ಮುಟ್ಟಿಕೊಂಡಂತೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.**55/1** ರಲ್ಲಿರುವ ರಸ್ತೆ ಹೊಸಗುತ್ತಿಯಿಂದ ಅಪ್ಪಾಜಿ ರವರ ಜಾಗದವರೆಗೆ ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯನ್ನು ಅಪ್ಪಾಜಿ ಮಾಡಿದ್ದಾರೆ

ಎಂದರೆ ಸರಿಯಲ್ಲ. ಅದನ್ನು ಎಲ್ಲರೂ ಸೇರಿ ಮಾಡಿರುತ್ತಾರೆ. ಆ ರಸ್ತೆ ಅಪ್ಪಾಜಿ ರವರ ಜಾಗದವರೆಗೆ ಮಾತ್ರ ಬರುತ್ತದೆ ಎಂದರೆ ಸರಿ. ಆ ರಸ್ತೆ ಅಪ್ಪಾಜಿ ರವರ ಜಾಗ ಎಲ್ಲಿ ಮುಟ್ಟುತ್ತೊ ಅಲ್ಲಿ ಕಬ್ಬಿಣದ ಗೇಟ್ ಇದೆ ಎಂದರೆ ಸರಿಯಲ್ಲ.

**1**ನೇ ಪ್ರತಿವಾದಿ ಪೈಸಾರಿ ಜಾಗಕ್ಕೆ ಸೇರಿದಂತೆ ಬೇಲಿ ಹಾಕಿರುತ್ತಾರೆ. ಬೇಲಿ ಹಾಕಿ ಓಡಾಡಲು ಉಣಗಲು ಹಾಕಿರುತ್ತಾರೆ. ಹೊಸಗುತ್ತಿ ರಸ್ತೆಯಿಂದ ಅವರ ಉಣಗಲುಗೆ ಮಾತ್ರ ರಸ್ತೆ ಇರುತ್ತದೆ ಎಂದರೆ ಸರಿ. ಅಲ್ಲಿಂದ ಕೆರೆವರೆಗೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಅಲ್ಲಿ ರಸ್ತೆ ಹಿಂದೆ ಇತ್ತು ಈಗ ಇರುವುದಿಲ್ಲ. ಅಲ್ಲಿಂದ ಮುಂದಕ್ಕೆ ಹೋಗಬೇಕಾದರೆ ಅಪ್ಪಾಜಿ ರವರ ರಸ್ತೆಯ ಮೂಲಕ ಹೋಗಬೇಕು ಎಂದರೆ ಸರಿ. ಸರ್ವೆ ನಂ.**55/1** ರಸ್ತೆಯನ್ನು ಈಗ ಉಪಯೋಗಿಸಲು ಪ್ರತಿವಾದಿಗಳು ಬಿಡುತ್ತಿಲ್ಲ. ಹಾಗಾಗಿ ಈಗ ಅದನ್ನು ಉಪಯೋಗಿಸಲು ಆಗುತ್ತಿಲ್ಲ. ಆದ ಕಾರಣದಿಂದ ಈ ದಾವೆ ಹೂಡಲಾಗಿರುತ್ತದೆ. ಸರ್ವೆ ನಂ.**55/1** ಪೈಸರಿ ಜಾಗ. ಕೆರೆಯ ಉತ್ತರಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಈಗ **2**ನೇ ಪ್ರತಿವಾದಿಯ ಜಮೀನಿನಲ್ಲಿ ಅವರ ಬೆಳೆ ಇಲ್ಲದಿದ್ದಾಗ ನಮ್ಮ ಜಮೀನಿಗೆ ಟ್ರಾಕ್ಟರ್ ಮೂಲಕ ಹೋಗಿ ವ್ಯವಸಾಯ ಮಾಡುತ್ತೇವೆ. ಎಲ್ಲಾ ಜಮೀನಿಗೆ ಬದುಗಳು ಇರುತ್ತವೆ.

ಗದ್ದೆ ಜಮೀನು ಮತ್ತು ಹೊಲಗಳಿಗೆ ಓಡಾಡಲು ಯಾರು ತಕರಾರು ಮಾಡುವುದಿಲ್ಲ ಎಂದರೆ ಸರಿ. ನನ್ನ ಮತ್ತು **1**ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿಲ್ಲ. **2**ನೇ ಪ್ರತಿವಾದಿಯ ಜೊತೆ ಚೆನ್ನಾಗಿರುತ್ತದೆ. **2**ನೇ ಪ್ರತಿವಾದಿ ಮೇಲೆ **1**ನೇ ಪ್ರತಿವದಿ ನಾನು ಹೇಳಿರುವ ರಸ್ತೆ ಸರ್ವೆ ನಂ.**55/1** ರಿಂದ **1**ನೇ ಪ್ರತಿವಾದಿಯ ಆಸ್ತಿಯಾದ ಸರ್ವೆ ನಂ.**55/24, 55/23** ಆಸ್ತಿಯವರೆಗೆ ಇರುವ ಉಣಗಳಿಗೆ ರಸ್ತೆ ಇದ್ದು ಆ ರಸ್ತೆಗೆ **2**ನೇ ಪ್ರತಿವಾದಿ ಓಡಾಡಲು ತಕರಾರು ಮಾಡುತ್ತಿದ್ದಾರೆ ಎಂದು ದಾವೆ ಹೂಡಿದ್ದಾರೆ ಎಂದರೆ ಸರಿ. ಅದು ಅಸಲು ದಾವಾ ನಂ.**108/2021** ಎಂದರೆ ಸರಿ. ಆ ದಾವೆ ಇನ್ನೂ ತೀರ್ಮಾನ ಆಗಿಲ್ಲ.

**2** ನೇ ಪ್ರತಿವಾದಿಯ ಮಾತನ್ನು ಕೇಳಿ **1** ನೇ ಪ್ರತಿವಾದಿಗೆ ತೊಂದರೆ ಕೊಡಲು ನನಗೆ ರಸ್ತೆಯ ಅವಶ್ಯಕತೆ ಇಲ್ಲದಿದ್ದರೂ ಈ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ರಂಗಸ್ವಾಮಿ, ಮಂಜುನಾಥ ನಮ್ಮ ಜಮೀನಿಗೆ ಹೋಗಲು ತೊಂದರೆ ಮಾಡಿಲ್ಲ ಎಂದರೆ ಸರಿಯಲ್ಲ, ಬೆಳೆ ಇದ್ದಾಗ ತೊಂದರೆ ಮಾಡಿರುತ್ತಾರೆ. ಹೊಸಗುತ್ತಿ ರಸ್ತೆಯನ್ನು ನಮ್ಮ ಜಮೀನಿಗೆ ಹೋಗಲು ಉಪಯೋಗಿಸಿಲ್ಲ ಎಂದರೆ ಸರಿಯಲ್ಲ. ರಸ್ತೆಯ ಬಗ್ಗೆ ಮಂಜುನಾಥ, ಗರುಡಾಚಾರಿ ಸೇರಿಕೊಂಡು ದಿಃ**13-06-2016** ರಲ್ಲಿ ರಸ್ತೆಯ್ನು ಅಪ್ಪಾಜಿ ಮಾಡಬೇಕು ಮತ್ತು ಯಾರು ತಕರಾರು ಮಾಡುವುದಿಲ್ಲ ಎಂದು ಒಪ್ಪಂದ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತ ಪಟ್ಟು **3** ವರ್ಷ ಆಗಿರುತ್ತದೆ. ಅಸಲು ದಾವಾ ನಂ.**108/2021** ರಲ್ಲಿ ನಿಪಿ **2** ದಾಖಲೆ ಮಾಡಿಕೊಳ್ಳುವಾಗ ನಾನು ಆ ರಸ್ತೆಯನ್ನು ಉಪಯೋಗಿಸುತ್ತಿದ್ದರೆ ನಮ್ಮನ್ನು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನಾವು ಉಪಯೋಗಿಸುತ್ತಿದ್ದೇವು ನಮ್ಮನ್ನು ಕರೆದಿಲ್ಲ. ಆ ರಸ್ತೆ ಉಪಯೋಗಿಸದ ಕಾರಣ ನಮ್ಮನ್ನು ಕರೆದಿಲ್ಲ ಎಂದರೆ ಸರಿಯಲ್ಲ. ಒಪ್ಪಂದ ಪತ್ರ ಬರೆದುಕೊಟ್ಟಿರುವ ಬಗ್ಗೆ ನನಗೆ **2** ನೇ ಪ್ರತಿವಾದಿ ದಾವೆ ಹೂಡಿದ ನಂತರ ಗೊತ್ತಾಗಿರುತ್ತದೆ. ಒಪ್ಪಂದ ಪತ್ರಕೆ ಆಕ್ಷೇಪಣೆ ಇದೆ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ನಾವು ಆಕ್ಷೇಪಣೆ ಮಾಡಿರುತ್ತೇವೆ.

ನಾನು ಕೇಳಿರುವ ರಸ್ತೆ ಸಾರ್ವಜನಿಕ ರಸ್ತೆ ಅಲ್ಲ ಎಂದರೆ ಸರಿಯಲ್ಲ. ನಕಾಶೆಯಲ್ಲಿರುವ ರಸ್ತೆ ಇಲ್ಲ ಎಂದರೆ ಸರಿ. ಆದರೆ ಪೈಸಾರಿ ಆಸ್ತಿಯಲ್ಲಿರುತ್ತದೆ. **1** ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ರಸ್ತೆ ನನಗೆ ಸಂಬಂಧ ಪಡದೇ ಇರುವ ಕಾರಣ **1** ನೇ ಪ್ರತಿವಾದಿ ತೊಂದರೆ ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ

ಸರಿಯಲ್ಲ. ಸರ್ವೆ ನಂ.ಃ **55/1** ರಲ್ಲಿರುವ ರಸ್ತೆ ಪೂರ್ತಿಯಾಗಿ **1** ನೇ ಪ್ರತಿವಾದಿಯ ಖಾಸಗಿ ರಸ್ತೆ ಎಂದರೆ ಸರಿಯಲ್ಲ. ಆ ರಸ್ತೆಯ ಮೇಲೆ ನನಗಾಗಲೀ, **2** ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡ**ಲಾ**ಗಿ**ದೆ).**

ಸಹಿ/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**